**ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ, ಮೇಯೋಹಾಲ್ ವಿಭಾಗ, ಬೆಂಗಳೂರು.**

**ದಿಃ 16.10.2024 ರಂದು ಸಾಕ್ಷಿದಾರರಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:**

ನಾನು ದಿನಾಂಕಃ 16.10.2024 ರಂದು ನಮ್ಮ ವಕೀಲರ ಮೂಲಕ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಈ ಕೆಳಗೆ ನಮೂದಿಸಿರುವ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

| | |
|---|---|
| ಅಧಿಕಾರ ಪತ್ರ | ನಿಪಿ.17 |
| ನೇಮಕಾತಿ ಪತ್ರ | ನಿಪಿ.18 |
| 8 ಪೇಸ್ಲಿಪ್‌ಗಳನ್ನು ಒಟ್ಟಾಗಿ | ನಿಪಿ.19 |
| ಸ್ಯಾಲರಿ ರಿವೈಸ್ ಲೆಟರ್ | ನಿಪಿ.20 |
| ಎರಡು ಪರಪಾರ್ಮೆನಸ್ ಪತ್ರಗಳನ್ನು ಒಟ್ಟಾಗಿ | ನಿಪಿ.21 |
| ಹಾಜರಾತಿ ವಿವರಗಳ 5 ಪುಟಗಳನ್ನು ಒಟ್ಟಾಗಿ | ನಿಪಿ.22 |

ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ 1 ನೇ ಎದುರುದಾರ ಪರ ವಕೀಲರಿಂದಃ**

ನಮ್ಮ ಸಂಸ್ಥೆಯಲ್ಲಿ ನಾನೇ ವೇತನದ ಪಟ್ಟಿಗಳನ್ನು ತಯಾರಿಸುತ್ತೇನೆ. ವೇತನವನ್ನು ಹಣಕಾಸಿನ ವಿಭಾಗದವರು ಮಾಡುತ್ತಾರೆ. ಮೃತ ವ್ಯಕ್ತಿ ಐ ಟಿ ಐ ಪದವಿದರಾಗಿದ್ದರು. ಮೃತ ವ್ಯಕ್ತಿ ಆಪರೇಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ನಾವು ಗ್ರೂಪ್ ಇನ್ಸುರೇನ್ಸ್ ಮಾತ್ರ ನೀಡುತ್ತೇವೆ. ನಮ್ಮಲ್ಲಿ ಮೂರು ತರ ಆದ ಅಂದರೆ ಎಬಿಸಿ ವಿಂಗಡಣೆಯ ನೌಕರರು

ಇದ್ದಾರೆ. ನೌಕರರ ಬ್ಯಾಂಕ್ ಖಾತೆಗೆ ಅವರ ಸಂಬಳ ಜಮಾ ಮಾಡುತ್ತೇವೆ. ಪಾರಂ16 ಸಲ್ಲಿಸಿಲ್ಲ, ಅದನ್ನು ಸಲ್ಲಿಸುತ್ತೇನೆ. ಪೇಸ್ಲಿಪ್ ನಲ್ಲಿರುವ ವೇತನಗಳು ವ್ಯತ್ಯಾಸವಾಗುತ್ತವೆ ಎಂದರೆ ಸರಿಯಲ್ಲ. ಯಾವಾಗಲೂ ವೇತನದ ವಿವರಗಳಲ್ಲಿ ವ್ಯತ್ಯಾಸವಿರುವುದಿಲ್ಲ. ದಾಖಲೆಗಳನ್ನು ಸೃಷ್ಟಿಸಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿ.ಪಿ.20 ನ್ನು ಸೃಷ್ಟಿಸಿದ್ದೀರಿ, ಅದರಂತೆ ವೇತನವನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.22 ರಲ್ಲಿ ನೌಕರರು ಎಷ್ಟು ಗಂಟೆಗಳ ಕಾಲ ಕೆಲಸ ನಿರ್ವಹಿಸಿದ್ದಾರೆ ಎಂಬುದನ್ನು ನಮೂದಿಸಲಾಗಿದೆ. ಗಂಟೆಗಳ ಆದಾರದ ಮೇಲೆ ವೇತನ ಪಾವತಿಸುತ್ತಿದ್ದೀರಿ ಎಂದರೆ ಸರಿಯಲ್ಲ. ನಿ.ಪಿ. 22 ರಂತೆ ನೀವು ಗಂಟೆಗಳ ಆದಾರದ ಮೇಲೆ ವೇತನ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ ಸಾಕ್ಷಿ ಹಾಜರಾತಿ ವಿವರಗಳನ್ನು ನಿ.ಪಿ. 22 ರಲ್ಲಿ ನಮೂದಿಸಿರುತ್ತಾರೆ ಎನ್ನುತ್ತಾರೆ. ನಿ.ಪಿ. 22 ರಂತೆ ದಿನಾಂಕ 02.09.2023 ರಂದು ಎರಡನೇ ಶಿಪ್ಟ್ ನಲ್ಲಿ ಕೆಲಸ ಮಾಡಿದ್ದರು ಅದರಂತೆ ಮಧ್ಯ ರಾತ್ರಿ 12 ಗಂಟೆಗೆ ಅವರ ಕರ್ತವ್ಯ ಅಂತಿಮಗೊಂಡಿತ್ತು. ನಿ.ಪಿ.22 ರಲ್ಲಿ ಕೆಲ ವಿವರಗಳನ್ನು ಉದ್ದೇಶಪೂರ್ವಕವಾಗಿ ನಮೂದಿಸಿಲ್ಲ ಎಂದರೆ ಸರಿಂಯಲ್ಲ, ಸಾಕ್ಷಿ ಅದು ಹಾಜರಾತಿ ವಿವರ ಎನ್ನುತ್ತಾರೆ. ಮಹದೇವನ್ ಅವರಿಗೆ ನೀವು ಹೇಳಿರುವ ಹಾಗೆ ವೇತನವನ್ನು ನೀಡುತ್ತಿರಲಿಲ್ಲ, ಅವಧಿಯ ಆದಾರದ ಮೇಲೆ ವೇತನ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ. ಐಟಿಐ, ಟಿಡಿ ಎಸ್ ವಿವರಗಳನ್ನು ಸಲ್ಲಿಸುತ್ತೇನೆ. ಮೃತ ವ್ಯಕ್ತಿಯ ಕುಂಟಂಬಕ್ಕೆ ಸಹಾಯ ಮಾಡಲು, ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ. ಹೇ.ಕೇ. ಸರಿ ಇದೆ.

ಐದನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಲಯ,
ಮೇಯೋಹಾಲ್ ವಿಭಾಗ, ಬೆಂಗಳೂರು.